**ಸಾಕ್ಷಿಯನ್ನು ದಿಃ 24.01.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಈ ದಾವೆ ಹಾಕಿದಾಗ ನನಗೆ 30-35 ವರ್ಷ ಆಗಿತ್ತು. ಈಗ ನನಗೆ 40-45 ವರ್ಷ ಆಗಿದೆ. ನನಗೆ 60 ವರ್ಷ ಎಂದು ನಾನು ಬರೆಸಿಲ್ಲ.

2. ನಮ್ಮ ತಂದೆ ಚಿಕ್ಕೇಗೌಡರ ತಂದೆಯ ಹೆಸರು ನಿಂಗೇಗೌಡ.

3. ನಿಂಗೇಗೌಡರಿಗೆ ಕಾಳೇಗೌಡ ಹಾಗೂ ಚಿಕ್ಕೇಗೌಡ ಎಂಬ ಇಬ್ಬರು ಮಕ್ಕಳು ಎಂದರೆ ಸರಿ.

4. ಸದರಿ ಕಾಳೇಗೌಡರಿಗೆ ದಶರಥ ಎಂಬ ಮಗ ಇದ್ದಾರೆ ಎಂದರೆ ಸರಿ.

5. ನೀವು ಹುಟ್ಟಿದಾಗಿನಿಂದ ಹರವೆ ಮಲ್ಲರಾಜ ಪಟ್ಟದಲ್ಲಿ ವಾಸವಿದ್ದಿರಾ ಎಂದರೆ, ನಾನು ಕಗ್ಗುಂಡಿಯಲ್ಲಿ ವಾಸವಿದ್ದೇನೆ ಎಂದು ನುಡಿಯುತ್ತಾರೆ.

6. ನಾನು ಕಗ್ಗುಂಡಿಯಲ್ಲಿ ವಾಸವಿರುವ ಬಗ್ಗೆ ದಾಖಲಾತಿ ಇದೆ.

7. ನಾನು ವಾದಪತ್ರದಲ್ಲಿ ಹರವೆ ಮಲ್ಲರಾಜಪಟ್ಟಣ ವಿಳಾಸ ನೀಡಿ ದಾವೆ ಹಾಕಿದ್ದೇನೆ ಎಂದರೆ ಸರಿ.

8. ನಿಮ್ಮ ಮತದಾರರ ಚೀಟಿ, ಪಡಿತರ ಚೀಟಿ ಹರವೆ ಮಲ್ಲರಾಜಪಟ್ಟಣ ವಿಳಾಸದಲ್ಲಿದೆ ಎಂದರೆ ಸರಿ.

9. ದಾವಾ ಸ್ವತ್ತು ಹೊಂಬಾಳಮ್ಮ ನವರಿಗೆ ಸೇರಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ.

10. ನಿಮ್ಮ ತಂದೆ ಚಿಕ್ಕೇಗೌಡರು, ದಾವಾ ಆಸ್ತಿಯಲ್ಲಿ ಬಂದ ಫಸಲಿನ ಉತ್ಪತ್ತಿಯಲ್ಲಿ ಅರ್ಧ ನಿಮಗೆ ಹಾಗೂ ಅರ್ಧ ನಮಗೆ ಎಂದು ಮೌಖಿಕವಾಗಿ ರುದ್ರಪ್ಪನವರಿಗೆ ಮಾತುಕತೆ ಮೂಲಕ ತಿಳಿಸಿರುತ್ತಾರೆ ಎಂದು ದಾವಾ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸರಿಯಲ್ಲ.

11. ನಾನು ರುದ್ರಪ್ಪನವರನ್ನು ಖುದ್ದಾಗಿ ನೋಡಿಲ್ಲ. ಸದರಿ ರುದ್ರಪ್ಪನವರು 1961 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

12. ದಾವಾ ಆಸ್ತಿಯಲ್ಲಿ ಬೆಳೆದ ಉತ್ಪತ್ತಿಯಲ್ಲಿ ಕೇಳಿದ್ದು, ಕೊಡುವುದಿಲ್ಲ ಎಂದು ತಿಳಿಸಿದರು ಎಂದು ನೀವು ಬರೆಸಿದ್ದೀರಾ ಎಂದರೆ ಬರೆಸಿಲ್ಲ ಎಂದು ನುಡಿಯುತ್ತಾರೆ.

13. ರುದ್ರಪ್ಪನವರ ಹೆಸರಿನಲ್ಲಿ 30 ವರ್ಷದ ಹಿಂದೆ ಖಾತೆ ಇತ್ತು ಎಂದರೆ ಸರಿಯಲ್ಲ.

14. ಪ್ರತಿವಾದಿಯ ಹೆಸರಿಗೆ ಯಾವ ದಾಖಲಾತಿ ಆಧಾರದ ಮೇಲೆ ಖಾತೆ ಹೋಯಿತು ಎಂದರೆ ನನಗೆ ಗೊತ್ತಿಲ್ಲ, ಅದರ ಸಲುವಾಗಿಯೇ ನಾವು ಈ ದಾವೆ ಹಾಕಿರುತ್ತೇವೆ ಎಂದು ನುಡಿಯುತ್ತಾರೆ.

15. 2 ನೇ ವಾದಿ ಜಗದೀಶ ನನ್ನ ಅಣ್ಣ. ಅವರು ಹಾಗೂ ನಾನು ಅನ್ಯೋನ್ಯವಾಗಿದ್ದೇವೆ.

16. ನಮ್ಮ ತಾತ ನಿಂಗೇಗೌಡರು ಏನೇನು ವ್ಯವಹಾರ ಮಾಡುತ್ತಿದ್ದರು ಎಂದು ನನಗೆ ಗೊತ್ತು.

17. ದಾವಾ ಸ್ವತ್ತಿನ ರೆವಿನ್ಯೂ ದಾಖಲೆಗಳ ಮೂಲ ದಾಖಲಾತಿಗಳಲ್ಲಿ ಭೋಗ್ಯ ಮತ್ತು ಕ್ರಯವಾಗಿದೆ ಎಂದು ದಾವಾ ಪತ್ರದಲ್ಲಿ ಬರೆಸಿದ್ದೀರಾ ಎಂದರೆ, ಬರೆಸಿಲ್ಲ ಎಂದು ನುಡಿಯುತ್ತಾರೆ.

18. ರೆವಿನ್ಯೂ ದಾಖಲಾತಿಗಳು ಪ್ರತಿವಾದಿಯ ಹೆಸರಿಗೆ ಹೋಗಿರುವುದು ಯಾವಾಗ ಗೊತ್ತಾಯಿತು ಎಂದರೆ, ಈ ದಾವೆ ಹಾಕುವ 15 ದಿನಗಳ ಹಿಂದೆ ಗೊತ್ತಾಯಿತು ಎಂದು ನುಡಿಯುತ್ತಾರೆ.

19. ಈ ದಾವೆಯನ್ನು ನನ್ನ ತಂದೆ ಚಿಕ್ಕೇಗೌಡರ ಆಸ್ತಿ, ನನಗೆ ಬೇಕು ಎಂದು ಹಾಕಿದ್ದೇನೆ.

20. ಚಿಕ್ಕೇಗೌಡರ ಹೆಸರಿನಲ್ಲಿ ದಾವಾ ಆಸ್ತಿ ಇರುವ ಬಗ್ಗೆ ದಾಖಲಾತಿ ನೀಡಿರುತ್ತೇನೆ.

21. ಚಿಕ್ಕೇಗೌಡರಿಗೆ ಶೋಭಾ ಹಾಗೂ ಪ್ರೇಮಾ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ.

22. ದಾವಾ ಆಸ್ತಿಯನ್ನು ನಿಂಗೇಗೌಡರ ಮಗ ಕಾಳೇಗೌಡ, ಕಾಳೇಗೌಡರ ಮಗ ದಶರಥ, ನಿಂಗೇಗೌಡರ ಮಗ ಚಿಕ್ಕೇಗೌಡ ಮೂರು ಸೇರಿಕೊಂಡು ಪ್ರತಿವಾದಿಗೆ ದಿಃ 22.02.1989 ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನೀವು ಸದರಿ ಕ್ರಯಪತ್ರವನ್ನು ನೋಡಿದ್ದೀರಾ ಎಂದರೆ, ನೋಡಿಲ್ಲ.

23. 1989 ರಿಂದ 1999 ರ ವರೆಗೆ ದಾವಾ ಶೆಡ್ಯೂಲ್ ಆಸ್ತಿಯ ಖಾತೆ ರುದ್ರಪ್ಪನವರ ಮಗ ಸದಾಶಿವಯ್ಯನವರ ಹೆಸರಿಗೆ ನಮೂದಾಗಿತ್ತು ಎಂದರೆ ಸರಿಯಲ್ಲ.

24. ಪ್ರತಿವಾದಿ ತಕರಾರು ಹಾಕಿದ ನಂತರ ಅದರಲ್ಲಿ ಕಾಣಿಸಿದ ದಿಃ 22.02.1989 ರ ಕ್ರಯಪತ್ರವನ್ನು ನಾನು ಸಂಬಂಧಪಟ್ಟ ನೊಂದಣಿ ಕಛೇರಿಯಲ್ಲಿ ಪಡೆಯಲು ಪ್ರಯತ್ನ ಪಟ್ಟಿಲ್ಲ.

25. ಸದರಿ ಕ್ರಯಪತ್ರದಲ್ಲಿ ನಮೂದಾಗಿರುವ ಸರ್ವೇ ನಂಬರ್ ಗಳನ್ನು ನಾನು ತಿಳಿದುಕೊಂಡಿಲ್ಲ.

26. ಪ್ರತಿವಾದಿಯ ಕುಟುಂಬದರು ದಿಃ 11.10.1999 ರಲ್ಲಿ ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡು, ಸದರಿ ವಿಭಾಗದಲ್ಲಿ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿ ಬಂದಿತು ಎಂದರೆ ಸರಿಯಲ್ಲ. 1999 ರಿಂದಲೂ ದಾವಾ ಆಸ್ತಿ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ.

27. ದಾವಾ ಆಸ್ತಿಯಲ್ಲಿ ಪ್ರತಿವಾದಿಯು ತೆಂಗಿನ ಮರ ಹಾಕಿ, ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ, ನಾವು ತೆಂಗಿನ ಮರ ಬೆಳೆದು ನಾವು ವ್ಯವಸಾಯ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ.

28. 1989 ರಿಂದಲೂ ಸಹ ಪ್ರತಿವಾದಿಯವರೆಗ ಸ್ವಾಧೀನದಲ್ಲಿದ್ದು, ಅವರೇ ವ್ಯವಸಾಯ ಮಾಡುತ್ತಿದ್ದರೂ ಸಹ ಅವರ ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

29. ದಾವಾ ಆಸ್ತಿ ನಿಮ್ಮ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

30. ದಾವಾ ಆಸ್ತಿಯಲ್ಲಿ ನಿಮಗೆ ಹಕ್ಕು ಸ್ವಾಧೀನ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

31. ನಿಮಗೆ ಮೇಲೆ ಹೇಳಿದ ಕ್ರಯಪತ್ರದ ಬಗ್ಗೆ ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ